Reg No. B G 155 ಶ್ರೀ ಸ್ವಾತಂತ್ರ್ಯೋತ್ಸವ ಸಂಚಿಕೆ 15-8-1969

52nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ 2

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [ 2 ಪೈಸೆ

# ಭಾರತದ ಸ್ವಾತಂತ್ರ್ಯ ಚಿರಾಯುವಾಗಿರಲಿ

## ಸ್ವಾತಂತ್ರ್ಯದಿನೋತ್ಸವ

ಮೈಸೂರು— ಪುರಭವನದಲ್ಲಿ ಪುರಸಭಾ ಆಶ್ರಯದಲ್ಲಿ ಸ್ವಾತಂತ್ರ್ಯ ದಿನೋತ್ಸವವು ಇಂದು ಆಚರಿಸಲಾಗುವುದು.

★

## ಮೈಸೂರಿನ ಶ್ರೀಮನ್ಮಹಾರಾಜರವರು

ತಮ್ಮ ಏರೋಸ್ಯ ಪ್ರವಾಸ ಮುಗಿಸಿಕೊಂಡು ಮಂಗಳವಾರ ಬೊಂಬಾಯಿಗೆ ದಯಮಾಡಿಸಿದರು : ಮಾತುಂಗಾದಲ್ಲಿನ ಆಸ್ತಿಕ ಸಮಾಜಕ್ಕೆ ಭೇಟಿ ಕೊಟ್ಟರು — ನಂತರ ಮೈಸೂರಿಗೆ ಪ್ರಯಾಣಮಾಡಿದರು.

○

## ಮೈಸೂರು ರೇಸಸ್

ಮೈಸೂರು— ತಾ॥ 20 ರಿಂದ ಪ್ರಾರಂಭವಾಗುವ ಕುದುರೆ ಜೂಜಿನ ಸಂಬಂಧದ ಸೀನಿಯರ್ ಸ್ಟೈವರ್ಡ್ ಶ್ರೀ ಎಫ್. ಕೆ. ಇರಾನಿಯವರು ಬುಧವಾರ ಪತ್ರಿಕಾ ಗೋಷ್ಠಿಯಲ್ಲಿ ವಿವರಿಸಿದರು. ಈಗ ಏರ್ಪಡಿಸಿರುವ ಏಳು ದಿನಗಳ ರೇಸಸ್ ಜೊತೆಗೆ ಸಾಧ್ಯವಾದರೆ ಇನ್ನೂ ಎರಡು ನಡೆಸಲಾಗುವುದೆಂದೂ, ನಾಲ್ಕು ಲೆಗ್ ಮೇಲೆ ಜಾಕ್ ಪಾಟ್ ಏರ್ಪಡಿಸಲಾಗಿದೆಯೆಂದೂ 145 ಕುದುರೆಗಳು ಭಾಗವಹಿಸಲಿವೆಯೆಂದೂ, ರೇಸ್ ಕೋರ್ಸಿಗೆ ಬರುವ ಜನರ ಅನುಕೂಲಕ್ಕಾಗಿ ಸಿಟಿ ಬಸ್ ವ್ಯವಸ್ಥೆ ಮಾಡಲಾಗುವುದೆಂದೂ ತಿಳಿಸಲಾಯಿತು.

●

## ತೆರಿಗೆ ತಪ್ಪಿತಸ್ಥರು

ನವದೆಹಲಿ— ಕಳಿಂಗ ಗುಂಪಿನ ಕೈಗಾರಿಕಾ ಗುಂಪಿನವರದು ತೆರಿಗೆಬಾಕಿ ರೂ. 6 ಲಕ್ಷದಿಂದ 15 ಲಕ್ಷದವರೆಗಿರುವದೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು — ರೂ 5 ಲಕ್ಷಕ್ಕೆ ಮೇಲ್ಪಟ್ಟ ಬಾಕಿ ಒಟ್ಟು ರೂ 167 ಕೋಟಿ 1100 ಜನರಿಂದ ಬರಬೇಕಾಗಿದೆಯೆಂದೂ ತಿಳಿಸಲಾಯಿತು.

★

## ಪರ್ಯಾಲೋಚನೆ

ನವದೆಹಲಿ — ಐಶ್ವರ್ಯವಂತರಿಗೂ ಒಡವರಿಗೂ ಇರುವ ಆದಾಯ ಅಸಮಾನತೆಯನ್ನು ತಗ್ಗಿಸಲು ಆರ್ಥಿಕ ಮತ್ತಿತರ ನೀತಿಗಳನ್ನು ಪರಾಲೋಚಿಸಲಾಗುತ್ತಿದೆ ಎಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

## ಡಾ ॥ ನೋವಿಯವರ ಕಾರ್ಯಕ್ರಮ

ನೇತ್ರದಾನಿ ಪದ್ಮಭೂಷಣ ಡಾ॥ ಎಂ ಸಿ ಯವರು ತಾ॥ 17 ರಂದು ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ, ತಾ ॥ 18 ರಂದು ಹಾವೇರಿ, ರಾಣಿಬೆನ್ನೂರು, ಹರಿಹರ, ದಾವಣಗೆರೆಯಲಿ ನೇತ್ರಪರೀಕ್ಷೆ ನಡೆಸುವರು.

★

## 9 ಮೃತ ಶರೀರಗಳು

ಬೊಂಬಾಯಿ— ವಿಶಾಲ ಬೊಂಬಾಯಿನ ಬೇರೆಬೇರೆ ರೈಲು ಮಾರ್ಗಗಳಲ್ಲಿ ಬುಧವಾರ ಒಟ್ಟು 9 ಮೃತ ಶರೀರಗಳು ಸಿಕ್ಕಿದವು - ಆಕಸ್ಮಿಕಗಳಿಗೆ ತುತ್ತಾದವರೆಂದು ಹೇಳಲಾಗಿದೆ.

●

## ಬಹಿರಾಕಾಶ

ನವದೆಹಲಿ— ಬಹಿರಾಕಾಶ ಸಂಶೋಧನೆ, ಕಾಸ್ಮಿಕ್ ರೇ, ರಾಕೆಟ್ ಬಗ್ಗೆ ಕಳೆದ ವರ್ಷ ಸುಮಾರು ರೂ 2.12 ಕೋಟಿ ಖರ್ಚಾಗಿವೆಯೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

## ಕಾರ್ಪೊರೇಷನ್ ಚುನಾವಣೆ

ಬೆಂಗಳೂರು— ರದ್ದುಪಡಿಸಿರುವ ಕಾರ್ಪೊರೇಷನ್ ಚುನಾವಣೆಯು ಡಿಸೆಂಬರಿನಲ್ಲಿ ನಡೆಸಲಾಗುವುದೆಂಬ ಭರವಸೆಯನ್ನು ಪೌರಸಮಿತಿ ಸರಕಾರಕ್ಕೆ ಕೇಳಿಕೆಹಾಕಿದೆ.

★

## ಪ್ರಜಾಪ್ರಭುತ್ವದ ಭವಿಷ್ಯ

ಮದ್ರಾಸು— ಅಧ್ಯಕ್ಷ ಚುನಾವಣೆಯಲ್ಲಿ ದೇಶವಲ್ಲಿನ ಪ್ರಜಾಪ್ರಭುತ್ವದ ಭವಿಷ್ಯ ನಿರ್ಧಾರವಾಗುವದೆಂದು ಸ್ವತಂತ್ರ ಪಕ್ಷದ ನಾಯಕ ಶ್ರೀ ಮುನಾನಿ ಹೇಳಿದರು.

# ರಾಷ್ಟ್ರಪತಿ ಚುನಾವಣೆ ನಾಳೆ

ಬೆಂಗಳೂರು— ಮೈಸೂರಿನ ಕಾಂಗ್ರೆಸ್ ವೋಟುಗಳೆಲ್ಲಿ ಶ್ರೀ ಸಂಜೀವ ರೆಡ್ಡಿಯವರಿಗೇ ಹೋಗುವದೆಂದು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರೂ ಮತ್ತು ಕಾಂಗ್ರೆಸ್ ನಾಯಕ ಡಾ ॥ ನಾಗಪ್ಪ ಆಳ್ವಾರವರೂ ಪೂರ್ಣ ಭರವಸೆ ವ್ಯಕ್ತಪಡಿಸಿದಾರೆ

★

ಕಾಶ್ಮೀರ ಬಿಟ್ಟು ಮಿಕ್ಕೆಲ್ಲ ಶಾಸನ ಸಭಾ ಕಾಂಗ್ರೆಸ್ಸು ಪಾರ್ಟಿಗಳ ನಾಯಕರು ಪಾರ್ಟಿ ಸದಸ್ಯರಿಗೆ ಪಾರ್ಟಿ ಉಮೇದುವಾರರಾದ ಶ್ರೀ ಸಂಜೀವರೆಡ್ಡಿಯವರಿಗೇ ವೋಟು ಮಾಡುವಂತೆ ಆದೇಶವಿತ್ತಿರುವರು — ಕಾಶ್ಮೀರದಲಿ ಪಾರ್ಟಿ ಉಮೇದುವಾರರ ವಿರುದ್ಧ ವೋಟು ಮಾಡಲು ನಿರ್ಧರಿಸಲಾಗಿದೆ.

★

ನವದೆಹಲಿ— ಕಾಂಗ್ರೆಸ್ ಸಂಸ್ಥೆ ಮತ್ತು ಸರಕಾರದ ನಾಯಕತ್ವ ಬಗ್ಗೆ ಚೂಪಾದ ಭೇದ ಒದಗಿದೆ — ಶ್ರೀ ನಿಜಲಿಂಗಪ್ಪನವರ ವಿನಂತಿಯಂತೆ ಪ್ರಧಾನಿ ಇಂದಿರಾರವರು, ಶ್ರೀ ಸಂಜೀವರೆಡ್ಡಿಯನರಿಗೇ ವೋಟು ಮಾಡುವಂತೆ-ಕಾಂಗ್ರೆಸಿಗರಿಗೆ ಆದೇಶ ಕೊಡಲು ತಿರಸ್ಕರಿಸಿರುವರು — ಮತ್ತೆ ಅವರನ್ನು ಕೇಳಿಕೊಳ್ಳಲಾಗಿದೆ.

●

ನವದೆಹಲಿ— ಅಧ್ಯಕ್ಷ ಚುನಾವಣೆಯಲ್ಲಿ ವೋಟುಮಾಡಲು ಸ್ವತಂತ್ರವಿರಬೇಕೆಂದು ಮಾಜಿ ಮಂತ್ರಿ ಶ್ರೀ ನಂದಾರವರು ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪ ಮತ್ತು ಪ್ರಧಾನಿ ಇಂದಿರಾರವರನ್ನು ಒತ್ತಾಯ ಮಾಡಿರುವರು.

## ರಾಷ್ಟ್ರಾಧ್ಯಕ್ಷರ ಸಂದೇಶ

ನವದೆಹಲಿ— ಸ್ವಾತಂತ್ರ್ಯೋತ್ಸವದ ಹಿಂದಿನದಿನ ಹೆಂಗಾಮಿ ರಾಷ್ಟ್ರಾಧ್ಯಕ್ಷ ಶ್ರೀ ಹದಾಯತ್ ಉಲ್ಲಾರವರು ಮಾಡಿದ ಪ್ರಸಾರ ಭಾಷಣದಲ್ಲಿ, ಪ್ರಜಾಪ್ರಭುತ್ವದ ಮುಂದುವರಿಕೆಗೆ ಹೊಣೆಗಾರಿಕೆಯಿಂದ ಆಲೋಚಿಸಿ ಕಾರ್ಯತತ್ಪರರಾಗಬೇಕೆಂದು ಜನತೆಗೆ ಕರೆಯಿತ್ತರು.

★

## ಮುಖ್ಯಮಂತ್ರಿಗಳವರ ಸಂದೇಶ

ಬೆಂಗಳೂರು— ಸ್ವಾತಂತ್ರದಿನೋತ್ಸವ ಸಂಬಂಧದಲ್ಲಿನ ತಮ್ಮ ಸಂದೇಶವಲ್ಲಿ— ಈ 23 ನೇ ಸ್ವಾತಂತ್ರ್ಯ ದಿನೋತ್ಸವದಂದ, ಐಕ್ಯತೆಯಿಂದಿರುವ, ಕಷ್ಟಪಟ್ಟು ಕೆಲಸ ಮಾಡು, ಹೆಚ್ಚು ಉತ್ಪಾದಿಸುವ, ನಮ್ಮ ಆರ್ಥಿಕ ಚಟುವಟಿಕೆಯನ್ನು ಸ್ವಾವಲಂಬಿಸುವ ಬಗ್ಗೆ ಪ್ರತಿಜ್ಞೆ ಮಾಡಬೇಕೆಂದು ಮುಖ್ಯ ಮಂತಿ, ಶ್ರೀ ವೀರೇಂದ್ರ ಪಾಟೀಲರು ತಿಳಿಸಿರುವರು.

★

ನವದೆಹಲಿ— 254 ಸ್ವಾಮಿಭಕ್ತರ ಸಹಿ ಒಂದು ಕಡೆಯೂ, ಪ್ರಧಾನಿ ಶಿಬಿರದ ಸ್ವತಂತ್ರ ವೋಟಿನ ಮತ್ತೊಂದು ಕಡೆಯಲ್ಲಿ 150 ಸಹಿ ಸಂಗ್ರಹವಾಗಿರುವುದಂದು ಹೇಳಲಾಗಿದೆ.

★

ನವದೆಹಲಿ— ಶ್ರೀ ಅರ್ಜುನ ಅರೋರರನ್ನು ಕಾಂಗ್ರೆಸ್ ಅಧ್ಯಕ್ಷರು ಕಾಂಗ್ರೆಸ್ ಪಾರ್ಟಿಯಿಂದ ಸಸ್ಪೆಂಡುಮಾಡಿದರು — ಪ್ರಧಾನಿ ಇಂದಿರಾರನ್ನೂ ಸಸ್ಪೆಂಡು ಮಾಡುವರಾ ಎಂದು ಇಂದು ಇದನ್ನು ಪರ್ಯಾಲೋಚಿಸುತ್ತಿಲ್ಲವೆಂದು ಹೇಳಿದರು.

★

ನವದೆಹಲಿ— ವೋಟು ಕೊಡುವದರಲ್ಲಿ ಸ್ವಾತಂತ್ರ್ಯವೆಂದರೆ, ಪಾರ್ಟಿ ಅಶಿಸ್ತೆಂದೂ ಕಾಂಗ್ರೆಸಿಗರು ತಮತಮ್ಮ ಆತ್ಮಸಾಕ್ಷಿಯಂತೆ ವೋಟು ಮಾಡುವ ಪ್ರಶ್ನೆಯೇ ಇಲ್ಲವೆಂದೂ ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಹೇಳಿದರು.

(2)



# ಭಾರತದ ರಾಷ್ಟ್ರೀಯ ದಿನ

ಭಾರತದಲ್ಲಿ ಸೋವಿಯತ್ ಒಕ್ಕೂಟದ ರಾಯಭಾರಿ ಶ್ರೀ ಎಂ. ಎಸ್. ಪೆಗೋವ್ ರವರ ಲೇಖನದಿಂದ

ಭಾರತದ ಜನರಿಗೆ ನಿಮಗೆ, ನಿಮ್ಮ ಸ್ವತಂತ್ರ ದಿನದಂದು ನನ್ನ ಹಾರ್ದಿಕ ಅಭಿನಂದನೆಗಳು. ನಾನು ನನ್ನ ಹೃದಯಾಂತರಾಳದಿಂದ ನಿಮಗೆ ಸಮೃದ್ಧಿಯನ್ನೂ ಶುಭಾಶಯಗಳನ್ನೂ ಕೋರುತ್ತೇನೆ.

ಭಾರತವು ಸ್ವತಂತ್ರ ರಾಜ್ಯವಾಗಿ ಉದಯವಾದುದು ನಮ್ಮ ಕಾಲದ ಒಂದು ಮಹತ್ವಪೂರ್ಣ ಘಟನೆಯಾಗಿದ್ದಿತು. ಅದು ಈ ನಾಡಿನಲ್ಲಿ ವಸಾಹತು ವ್ಯವಸ್ಥೆಯನ್ನು ಕೊನೆಗಾಣಿಸಿತು ಮಾತ್ರವಲ್ಲ, ಏಷ್ಯ ಮತ್ತು ಆಫ್ರಿಕಾ ಖಂಡಗಳಲ್ಲಿ ವಸಾಹತು ವಿರುದ್ಧ ವಿಚ್ಛಿನ್ನತೆಯ ಪ್ರಕ್ರಿಯೆಯನ್ನೇ ಗಣನೀಯವಾದ ಪ್ರಭಾವವನ್ನೂ ಬೀರಿದೆ. ಭಾರತದ ಜನತೆಗೆ ನಡೆಸಿದ ಸ್ವಾತಂತ್ರ್ಯ ಹೋರಾಟವು ಕಷ್ಟಕರವೂ ದೀರ್ಘ ಆಗಿದ್ದಿತು; ಆದರೆ ಅದು ಈ ವಿಶಾಲ ದೇಶದ ಪ್ರಗತಿ ಹಾಗೂ ಮುನ್ನಡೆಯ ಪಥವನ್ನು ತೆರೆಯಿತು.

ಸ್ವತಂತ್ರ ಭಾರತದ ಪ್ರಥಮ ಪ್ರಧಾನ ಮಂತ್ರಿಯಾಗಿದ್ದ ಜವಾಹರಲಾಲ್ ನೆಹರೂರವರು ತಮ್ಮ ಸಂಗಾತಿಗಳೊಂದಿಗೂಡಿ ಭಾರತವನ್ನು ಪ್ರಗತಿ ಪಥದಲ್ಲಿ, ರಾಷ್ಟ್ರೀಯ ಆರ್ಥಿಕ ವಿಕಾಸದ ಹಾಗೂ ಸ್ವತಂತ್ರ ವಿದೇಶಾಂಗ ನೀತಿಯ ಪಥದಲ್ಲಿ ಕೊಂಡುಹೋದರು. ವಿಶ್ವ ಶಾಂತಿಗಾಗಿ ಭಾರತದ ಹೋರಾಟ, ಮಿಲಿಟರಿ ಬಣಗಳಲ್ಲಿ ಸೇರದಿರುವ ನೀತಿ ದೇಶಕ್ಕೆ ಉನ್ನತ ಗೌರವವನ್ನು ಗಳಿಸಿಕೊಟ್ಟಿವೆ. ಎಲ್ಲ ಪ್ರಗತಿ ಶೀಲ ಮಾನವಕುಲವು ಇದನ್ನು ಆದರಿಸುತ್ತಿದೆ.

ಆರ್ಥಿಕ ಸ್ವಾತಂತ್ರ್ಯವು ನಾಡಿನ ಮುನ್ನಡೆಗೆ, ಜನತೆಯ ಉನ್ನತ ಜೀವನ ಪ್ರಮಾಣಗಳಿಗೆ ಅತ್ಯಾವಶ್ಯಕ ಪರಿಸ್ಥಿತಿಯಾಗಿದೆ. ಪ್ರಪಂಚದಲ್ಲಿ ಪ್ರಥಮ ಸಮಾಜವಾದೀ ರಾಜ್ಯದ ಸಂಸ್ಥಾಪಕರಾದ ವಿ ಐ ಲೆನಿನ್‌ರವರು– ಅವರ ಜನ್ಮ ಶತಾಬ್ದಿಯನ್ನು ಬರುವ ವಸಂತದಲ್ಲಿ ಸೋವಿಯತ್ ಜನತೆ ಮತ್ತು ಎಲ್ಲ ಪ್ರಗತಿಶೀಲ ಮಾನವಕುಲ ಆಚರಿಸಲಿರುವುದು– ಎಲ್ಲ ದೇಶಗಳ ಜನತೆಗಳಿಗೆ ಅವರ ಸಾಂರಾಜ್ಯವಾದ ವಿರೋಧ ಹೋರಾಟದಲ್ಲಿ, ಸಾಮಾಜಿಕ ಪ್ರಗತಿ ಸಾಧಿಸುವ ಅವರ ಪ್ರಯತ್ನಗಳಲ್ಲಿ ಸರ್ವತೋಮುಖ ನೆರವು ಹಾಗೂ ಬೆಂಬಲ ನೀಡುವುದು ಸೋವಿಯತ್ ನಾಡಿನ ಅಂತಾರಾಷ್ಟ್ರೀಯ ಕರ್ತವ್ಯವಾಗಿದೆ ಎಂದು ಹೇಳಿದ್ದರು. ಈ ಆಗಣಿತಗಳನ್ನನುಸರಿಸಿ ಸೋವಿಯತ್ ಜನತೆ ತನ್ನ ಅಂತಾರಾಷ್ಟ್ರೀಯ ಕರ್ತವ್ಯವನ್ನು ಈಡೇರುತ್ತಿದ್ದಾರೆ.

"ಇತ್ತೀಚಿನ ವರ್ಷಗಳಲ್ಲಿ, ಭಾರತ ಮತ್ತು ಸೋವಿಯತ್ ಒಕ್ಕೂಟಗಳ ನಡುವಿನ ಸಂಬಂಧಗಳ ಎರಡು ಸರಕಾರಗಳ ಮಾತ್ರವಲ್ಲ, ಎರಡು ಮಹಾ ಜನತೆಗಳ ಮೈತ್ರಿಯಾಗಿಯೂ ಕೂಡ ಬೆಳೆದಿದೆ. ಭಾರತದ ಜನತೆ ಆಧುನಿಕ, ಪುರೋಗಾಮಿ ಮತ್ತು ಶಾಂತಿಯುತ ಭಾರತವನ್ನು ನಿರ್ಮಿಸುವ ತಮ್ಮ ಮಹಾಪ್ರಯತ್ನದಲ್ಲಿ ಸೋವಿಯತ್ ಒಕ್ಕೂಟದಿಂದ ಪಡೆದ ಬಹುಮುಖ ನೆರವಿಗಾಗಿ ಅವರ ಗಾಢ ಮೆಚ್ಚುಗೆಯನ್ನು ನಾನು ತಲಪಿಸಬಯಸುತ್ತೇನೆ" ಎಂದು ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಹೇಳಿರುದರು.

ನಮ್ಮ ದೇಶದ ನೆರವಿನಿಂದ ನಿರ್ಮಿತವಾಗಿರುವ ಭಿಲೈ, ರಾಂಚಿ, ದುರ್ಗಾಪುರ್, ಹರ್‌ದ್ವಾರ್, ಕೊಯಾಲಿ, ನೈವೇಲಿ ಮತ್ತಿತರ ಭಾರಿ ಔದ್ಯೋಗಿಕ ಸಂಕೀರ್ಣಗಳ ವೃದ್ಧಿಗೊಳ್ಳುತ್ತಿರುವ ಜಾಲಬಂಧವು ಹರಡಿರುವ ಇಂದಿನ ಭಾರತವನ್ನು ಕಾಣಲು ನನಗೆ ಸೋವಿಯತ್ ಜನರಿಗೆ ಪ್ರಮಾಣಿಕವಾಗಿ ಸಂತೋಷವಾಗುತ್ತಿದೆ.

ಭಾರತದ ಮತ್ತು ಏಷ್ಯಾ ಮತ್ತು ಆಫ್ರಿಕಾಗಳ ಇತರ ಅಭಿವೃದ್ಧಿಗೊಳ್ಳುತ್ತಿರುವ ಸ್ವತಂತ್ರ ದೇಶದ ಜನತೆಗಳಿಗೆ ಸೋವಿಯತ್ ಸಹಾಯವು ಲಾಭ ಗಳಿಸುವ ಯಾವ ಉದ್ದೇಶವನ್ನೂ ಹೊಂದಿರುವುದಿಲ್ಲ.

"ನಮ್ಮ ಸಹಕಾರವು ಶಾಂತಿಯುತ ಸೃಜನಾತ್ಮಕ ಗುರಿಗಳಿಗೆ, ಭಾರತ ಮತ್ತು ಸೋವಿಯತ್ ಒಕ್ಕೂಟಗಳ ಜನತೆಗಳ ನಡುವೆ ಸ್ನೇಹ ಸಂಬಂಧಗಳ ಧೃಢೀಕರಣಕ್ಕೆ ಸಹಾಯಕವಾಗಿದೆ. ಅದು ಇತರ ಯಾವುದೊಂದು ದೇಶದ ವಿರುದ್ಧ ಗುರಿ ಹೊಂದಿಲ್ಲ. ಅದೇ ಸಮಯದಲ್ಲಿ, ಈಗ ಅಸ್ತಿತ್ವದಲ್ಲಿರುವ ವಿಶ್ವ ಉದ್ರಿಕ್ತ ವಾತಾವರಣದಲ್ಲಿ ಇಂತಹ ಸಹಕಾರವು ಭಾರತಕ್ಕೆ ತನ್ನ ಸ್ವತಂತ್ರ ನ್ಯಾಯೋಚಿತ ಆಸಕ್ತಿಗಳನ್ನು ರಕ್ಷಿಸಿಕೊಳ್ಳಲು ಸಹಕಾರಿಯಾಗಿದೆ. ಇದು ಏಷ್ಯಾದಲ್ಲಿ ಪ್ರಾಬಲ್ಯ ಸಾಧಿಸುವ ಗುರಿ ಹೊಂದಿರುವ ಬಾಹ್ಯ ಶಕ್ತಿಗಳ ದುಸ್ಸಾಹಸಕಾರೀ ಕೃತ್ಯಗಳ ಎದುರಿನಲ್ಲಿ ತನ್ನ ಪ್ರಾದೇಶಿಕ ಅಖಂಡತೆ ಮತ್ತು ಸಾರ್ವಭೌಮತ್ವವನ್ನು ರಕ್ಷಿಸಲು ನಾಡಿನ ಸಾಮರ್ಥ್ಯವನ್ನು ಅಸ್ವಯಿಸುತ್ತದೆ" ಎಂದು ಅಲೆಕ್ಸಿಯಿ ಕೋಸೀಗಿನ್ ಹೇಳಿದರು.

ಈ ವರ್ಷ ಭಾರತದ ಸ್ವಾತಂತ್ರ್ಯ ದಿನವು ಗಾಂಧೀ ಶತಮಾನೋತ್ಸವ ವರ್ಷದಲ್ಲಿ ಬರುತ್ತಿದೆ. ಮಹಾತ್ಮಾ ಗಾಂಧಿಯವರು ಭಾರತದ ಸ್ವಾತಂತ್ರ್ಯಕ್ಕಾಗಿ ದೃಢ ಹೋರಾಟಗಾರರಾಗಿದ್ದರು. ಅವರ ಬಗ್ಗೆ ಭಾರತೀಯ ಜನರ ಪ್ರೀತಿಯು ನನಗೆ ಅಪಾರ ಗ್ರಾಹ್ಯವೇ ಆಗಿದೆ. ಸೋವಿಯತ್ ಜನರಿಗೂ ಕೂಡ ಮಹಾತ್ಮಾ ಗಾಂಧಿಯವರ ನೆನಪು ಪ್ರಿಯವಾಗಿದೆ. ಆದ್ದರಿಂದ ಅನೇಕರು ಅವರ ಜನ್ಮಶತಾಬ್ದಿಯನ್ನು ಆಚರಿಸಲು ಸಿದ್ಧತೆ ನಡೆಸುತ್ತಿದ್ದಾರೆ.

### ರಾಜಾಘಾಟಿನಲ್ಲಿ ಗಾಂಧಿ ದರ್ಶನ

ಗಾಂಧಿ ಜನ್ಮ ಶತಾಬ್ದಿಯ ಅಂಗವಾಗಿ ದೆಹಲಿಯ ರಾಜಾಘಾಟಿನಲ್ಲಿ "ಗಾಂಧಿ ದರ್ಶನ" ಎಂಬ ಅಂತರಾಷ್ಟ್ರೀಯ ಪ್ರದರ್ಶನವನ್ನು ಏರ್ಪಡಿಸಲಾಗುತ್ತಿದೆ. ಮಹಾತ್ಮಾ ಗಾಂಧಿಯವರ ಜೀವನ, ವಿಚಾರ, ಕೃತಿಗಳು, ಸಂದೇಶಗಳು, ಹೀಗೆ ಪ್ರದರ್ಶನದಲ್ಲಿ ಆರು ಪ್ರಮುಖ ಮಳಿಗೆಗಳಿರುವವು.

———

### ರೈಲ್ವೆ : ದೇಶದ ಬೃಹತ್ ಸರ್ಕಾರಿ ಉದ್ಯಮ

ರೈಲ್ವೇ ಶಾಖೆ ಭಾರತದ ಬೃಹತ್ ಸರ್ಕಾರಿ ಉದ್ಯಮವಾಗಿದೆ. ಇದು ವಿಶ್ವದಲ್ಲಿ ಏಕಾಡಳಿತಕ್ಕೊಳಪಟ್ಟಿರುವ ರೈಲ್ವೇ ವ್ಯವಸ್ಥೆಯಲ್ಲಿ ದ್ವಿತೀಯ ಸ್ಥಾನ ಪಡೆದಿದೆ: ಮೊದಲನೆಯ ಸ್ಥಾನ ಸೋವಿಯತ್ ರೈಲೇದಾಗಿದೆ.

3500 ಕೋಟಿ ರೂಪಾಯಿ ಬಂಡವಾಳ ಮಾಡಿರುವ ಭಾರತೀಯ ರೈಲ್ವೇ ಶಾಖೆ ಪ್ರತಿ ದಿನವೂ ಎಶಧೂವರೆ ಕೋಟಿ ರೂಪಾಯಿಗಿಂತಲೂ ಹೆಚ್ಚು ವರಮಾನ ಪಡೆಯುತ್ತದೆ ; ರೈಲ್ವೇ ಶಾಖೆ ದೇಶದಲ್ಲೇ ಬೃಹತ್ತಾದ ಉದ್ಯೋಗಸಂಸ್ಥೆಯಾಗಿದೆ ; ರೈಲ್ವೆಯಲ್ಲಿ ಸುಮಾರು 13 ಲಕ್ಷ ಉದ್ಯೋಗಿಗಳಿದ್ದಾರೆ ; ರೈಲ್ವೇ ಶಾಖೆ ವರ್ಷಂಪ್ರತಿ 150 ಕೋಟಿ ರೂಪಾಯಿಗಿಂತಲೂ ಹೆಚ್ಚು ಹಣವನ್ನು ರಾಷ್ಟ್ರೀಯ ಬೊಕ್ಕಸಕ್ಕೆ ನೀಡುತ್ತದೆ.

ರೈಲ್ವೆಯು ದಿನಂಪ್ರತಿ 62 ಲಕ್ಷಕ್ಕಿಂತಲೂ ಹೆಚ್ಚು ಪ್ರಯಾಣೀಕರನ್ನೂ ಐದು ಲಕ್ಷ ಐವತ್ತು ಸಹಸ್ರ ಟನ್ ಸರಕನ್ನೂ ಸಾಗಿಸುತ್ತದೆ : ದಿನಂಪ್ರತಿ ಒಂದು ಕೋಟಿ ರೂಪಾಯಿ ಬೆಲೆಯ ಸ್ಥಾಧನೋಪಕರಣಗಳನ್ನು ಕೊಳ್ಳುವುದರಿಂದ ದೇಶದ ಕೈಗಾರಿಕೆಗಳಿಗೆ ರಕ್ಷೆ ನೀಡಿದೆ.

ರೈಲ್ವೇ ಶಾಖೆ 12 ಸಾವಿರ ರೈಲು ಎಂಜಿನುಗಳನ್ನೂ 33 ಸಾವಿರ ಪ್ರಯಾಣೀಕರ ಬಂಡಿಗಳನ್ನೂ 3 ಲಕ್ಷ 75 ಸಾವಿರ ವ್ಯಾಗನ್ನುಗಳನ್ನೂ ಪಡೆದಿದೆ.

### ಚತುರ್ಥ ಯೋಜನ ತಂತ್ರ : ಜನಸಂಖ್ಯಾ ನಿಯಂತ್ರಣ

( ಶ್ರೀ ಬಿ ಪಿ ಪಟೇಲರ ಲೇಖನದಿಂದ )

ಜನಸಂಖ್ಯಾ ಸ್ಫೋಟ ವಿಶ್ವವ್ಯಾಪಿ ಘಟನೆಯಾದರೂ ಇದು ಜಗತ್ತಿನಲ್ಲಿ ಅತ್ಯಧಿಕ ಜನಸಂಖ್ಯೆ ಹೊಂದಿರುವ ದೇಶಗಳಲ್ಲಿ ಒಂದಾದ ಭಾರತಕ್ಕೆ ಮಹಾಭೀತಿಯೊಡ್ಡಿದೆ ; ಭಾರತ ಜಗತ್ತಿನ ಶೇಕಡ 2.4 ರಷ್ಟು ಭೂಪ್ರದೇಶದಲ್ಲಿ ವಿಶ್ವಜನಸಂಖ್ಯೆಯ ಶೇಕಡ 14 ಭಾಗ ಪಡೆದಿದೆ.

ನಮ್ಮ ಯೋಜನಾತಜ್ಞರಿಗೆ ಆರಂಭಕಾಲದಿಂದಲೂ ಜನಸಂಖ್ಯಾ ಸಮಸ್ಯೆಯ ಅರಿವಿದೆ : ಸರಕಾರವು 1956 ನೇ ಇಸವಿಯಲ್ಲಿ ರಾಷ್ಟ್ರೀಯ ಮಟ್ಟದ ಜನಸಂಖ್ಯಾ ನಿಯಂತ್ರಣ ಕಾರ್ಯಕ್ರಮವನ್ನು ಆರಂಭಿಸಿತು. ಈ ದಿಸೆಯಲಿ ಭಾರತವೇ ಪ್ರಪ್ರಥಮವಾಗಿ ಕಾರ್ಯೋನ್ಮುಖವಾದ ದೇಶವಾಗಿದೆ.

ಕುಟುಂಬ ಯೋಜನಾ ಕಾರ್ಯಕ್ರಮ ಕ್ರಮೇಣ ವ್ಯಾಪಕವಾಗುತ್ತಿರುವ ಅಂಶ ಅದಕ್ಕಾಗಿ ವೆಚ್ಚಮಾಡುತ್ತಿರುವ ಹಣದಿಂದ ಗೋಚರವಾಗುತ್ತದೆ. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಕುಟುಂಬ ಯೋಜನೆಯಲ್ಲಿ ಕುಟುಂಬ ಯೋಜನೆಗಾಗಿ 1.45 ದಶಲಕ್ಷ ರೂಪಾಯಿ ವೆಚ್ಚ ಮಾಡಲಾಯಿತು. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ 21.56 ದಶಲಕ್ಷ ರೂಪಾಯಿಗೇರಿತು. ಈ ಪ್ರಮಾಣ ಮೂರನೇ ಯೋಜನೆಯಲ್ಲಿ 248.6 ದಶಲಕ್ಷ ರೂಪಾಯಿಗೇರಿತು. 68–69 ನೇ ವಾರ್ಷಿಕ ಸಾಲಿನ ಯೋಜನೆಯ ಮಧ್ಯಂತರ ಅವಧಿಯಲ್ಲಿ ಕುಟುಂಬ ಯೋಜನೆ ವೆಚ್ಚದ ಪ್ರಮಾಣ 700 ದಶಲಕ್ಷ ರೂಪಾಯಿಗಳಿಗೇರಿತು – 69–74 ನೇ ವಾರ್ಷಿಕ ಸಾಲಿನ ಚತುರ್ಥ ಯೋಜನೆಯ ಅವಧಿಯಲ್ಲಿ 3000 ದಶಲಕ್ಷ ( 300 ಕೋಟಿ ) ರೂಪಾಯಿಗಳ ಬೃಹತ್ ಮೊತ್ತವನ್ನು ಕುಟುಂಬ ಯೋಜನೆಗಾಗಿ ನಿಗದಿ ಮಾಡಲಾಗಿದೆ.

---

ಭಾರತದ ಸ್ವಾತಂತ್ರ್ಯ ದಿನದ ಸಂದರ್ಭದಲ್ಲಿ ಸೋವಿಯತ್ ಜನರು ತಮ್ಮ ಭಾರತೀಯ ಸೋದರರಿಗೆ ತಮ್ಮ ಹಾರ್ದಿಕ ಅಭಿನಂದನೆಗಳನ್ನು ಕಳುಹಿಸುತ್ತಾರೆ ಮತ್ತು ನಾಡಿನ ಭಾವೀ ಪ್ರಗತಿಯಲ್ಲಿ, ಆಧುನಿಕ, ಔದ್ಯೋಗಿಕ ಮತ್ತು ಸಮೃದ್ಧ ಭಾರತವನ್ನು ನಿರ್ಮಿಸುವ ಅವರ ಕನಸುಗಳನ್ನು ವಾಸ್ತವಿಕತೆಗೆ ತರುವುದರಲ್ಲಿ ಅವರಿಗೆ ಮುಹತ್ತರ ಯಶಸ್ಸುಗಳನ್ನು ಮನಃಪೂರ್ವಕವಾಗಿ ಕೋರುತ್ತಾರೆ.

[ ಸೋಯುತ್ ದೇಶ ]

.... ಸ್ವಾತಂತ್ರ್ಯ ದಿನೋತ್ಸವದ ಶುಭಾಶಯಗಳು ....

ಮೈಸೂರಿನಲ್ಲಿದ್ದಾಗ
ಇಲ್ಲಿ ತಂಗಿರಿ

# ಹೊಟೇಲ್ ಸುಜಾತ

ಎಲ್ಲ ಆಧುನಿಕ ಸೌಕರ್ಯಗಳನ್ನೊಳಗೊಂಡ
ಏಕೈಕ ಸುಖಕರವಾದ ಹೊಟೇಲ್

ಟೆಲಿಫೋನ್‌ಗಳು : ತಂತಿ : ಕಂಫರ್ಟ್

21475 ★ ಎಲ್ಲ ಕೋಣೆಗೂ ಪ್ರತ್ಯೇಕ ಆಟಾಚ್ಡ್ ಬಾತ್ ಮತ್ತು ಫೋನ್
22322 ★ ಸಭೆಸಮಾರಂಭ ಅಂಗಣ, ವಿಶಾಲ ಲಾನ್ಸ್, ರೂಫ್‌ಗಾರ್ಡನ್
22211 ★ ಕೂಟ ಮತ್ತು ನುದುವೆಗಳಿಗೆ ಬಾಂಬು ಮನೆ
22873 ★ ಸೊಗಸಾದ ತಯಾರಿಕೆ
★ ಚುರುಕಾದ ಮತ್ತು ವಿನಯಪೂರ್ವಕ ಸೇವೆ

★

.... ಶುಚಿ ರುಚಿ ಉಪಾಹಾರ ಮತ್ತು ಭೋಜನಕ್ಕೆ ....

# ಚಂದ್ರಕಳೆ

ಫೋನ್ : 23280



ಜಯಪ್ರದ 4 ನೇ ವಾರ

# ವುಡ್‌ಲ್ಯಾಂಡ್ಸ್

— ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

# ಇಂತಕಾಮ್ INTAQAM

ಪಾತ್ರ– ಸಂಜಯ್, ಸಾಧನ, ರಾಜೇಂದ್ರನಾಥ್, ಹೆಲೆನ್
ರಹೆಮ್ಮಾನ್, ಅಶೋಕುಮಾರ್
ಸಂಗೀತ : ಲಕ್ಷ್ಮೀಕಾಂತ್ – ಪ್ಯಾರೇಲಾಲ್

[ ದಿನ 3 ಪ್ರದರ್ಶನಗಳು ]

ಅಪೆರಾ— ಅಮೋಘ 6 ನೇ ವಾರ

ಅಮೋಘ ಆಕರ್ಷಣೀಯ ಕನ್ನಡ ಚಿತ್ರ — ಕಥೆ-ಸಂಭಾಷಣೆ : ತ. ರಾ. ಸು

# ಪುನರ್ಜನ್ಮ

ನಟವರ್ಗ— ರಾಜಕುಮಾರ್, ಬಾಲಕೃಷ್ಣ, ಜಯಂತಿ, ಚಂದ್ರಕಲಾ
ಜಯಶ್ರೀ, ರಮಾ, ರಂಗ, ಸತ್ಯ
ದಿನ 3 ಆಟಗಳು



Quality Printing — Neat Binding

# Lakshminarasimha Press

Sivarampet, Mysore


## Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah Sri Madhav Shenoi Sri Opera Talkies, Padmabhushana Dr. M.C. Modi, Dr. R. S. Nanjunda Swamy ( Glasgow) Sri Ananthanarasimha Iyengar ( Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.


# SHAKTI SUDHA

A Superb Tonic



# Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ
ಗೋರಕ್ಷಣೆಗೆ ಹೆಂಬಲ ನೀಡಿ

# Protect the Cow


Edited, Printed & Published by Dharmaprachara Nirata M S Krishna Rao ( Proprietor ) at the Satyavadi Press Chamarajapuram, Mysore 4

### ವಿಶ್ವ ಸಂಪರ್ಕ ವ್ಯವಸ್ಥೆಯಲ್ಲಿ ಭಾರತದ ಪಾತ್ರ

ಡಾ || ಎ ಎಸ್ ಭಾಟನಗರರ ಲೇಖನದಿಂದ

ಪೂನಾ–ನಾಸಿಕ್ ಹೆದ್ದಾರಿಯಲ್ಲಿ ಪೂನಾ ನಗರದಿಂದ 80 ಕಿಲೋಮೀಟರು ದೂರದಲ್ಲಿರುವ ಅರ್ವಿ ಗ್ರಾಮದಲ್ಲಿ ಭಾರತದ ಪ್ರಥಮ ಉಪಗ್ರಹ ಸಂಪರ್ಕ ಭೂ ಕೇಂದ್ರ ಸ್ಥಾಪಿಸಲಾಗುತ್ತದೆ ; ಈ ಕೇಂದ್ರದ ಮೂಲಕ ಭಾರತ ವಿಶ್ವ ಉಪಗ್ರಹ ಸಂಪರ್ಕ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸಲು ಸಾಧ್ಯವಾಗುತ್ತದೆ.

ವಿಶ್ವ ಉಪಗ್ರಹ ಸಂಪರ್ಕ ವ್ಯವಸ್ಥೆಯನ್ನು ಅಂತರರಾಷ್ಟ್ರೀಯ ಸಹಕಾರದಿಂದ ಸ್ಥಾಪಿಸಲಾಗುತ್ತಿದೆ. ಜಾಗತಿಕ ಒಪ್ಪಂದಗಳ ಆಶ್ರಯದಲ್ಲಿ 1964 ನೇ ಇಸವಿಯಲ್ಲಿ ಅಂತರರಾಷ್ಟ್ರೀಯ ಟೆಲಿಕಮ್ಯೂನಿಕೇಷನ್ ಉಪಗ್ರಹ ಕೂಟ ಸ್ಥಾಪಿಸಲಾಯಿತು. ಭಾರತವು ಈ ಒಪ್ಪಂದಗಳಿಗೆ 1965 ನೇ ಇಸವಿ ಫೆಬ್ರವರಿಯಲ್ಲಿ ಅಂಕಿತಹಾಕಿ ಕೂಟದ ಸದಸ್ಯತ್ವ ಪಡೆಯಿತು. ಇಂದು ಈ ಕೂಟ 68 ರಾಷ್ಟ್ರಗಳ ಸದಸ್ಯತ್ವ ಹೊಂದಿದೆ .... ವಿಶ್ವ ಉಪಗ್ರಹ ವ್ಯವಸ್ಥೆಯ ಪ್ರಾರಂಭಿಕ ವೆಚ್ಚ ಸುಮಾರು 200 ದಶಲಕ್ಷ ಅಮೇರಿಕ ಡಾಲರುಗಳೆಂದು ಅಂದಾಜು ಮಾಡಲಾಗಿದೆ .... ಭಾರತವು ಇದರಲ್ಲಿ ಶೇಕಡ 0.5 ಭಾಗ ಪೇರು ಹೊಂದಿದೆ, ಎಂದರೆ ಸುಮಾರು 70 ಲಕ್ಷ ರೂಪಾಯಿ ಪೇರು ಪಡೆದಿದೆ.

### ಡಾ || ಚಂದ್ರಶೇಖರ್‌ರವರ ಲೇಖನದಿಂದ

ವೈದ್ಯರ ಚಿಕಿತ್ಸೆ ಯಶಸ್ವಿಯಾಗಲು ಎರಡು ಅಂಶಗಳು ಬಹಳ ಮುಖ್ಯವಾಗಿವೆ— ( 1 ) ವೈದ್ಯರು ರೋಗಿಯನ್ನು ಚೆನ್ನಾಗಿ ಪರೀಕ್ಷಿಸಿ, ಅದಕ್ಕೆ ಅತ್ಯಗತ್ಯವಾದ ಔಷಧಗಳನ್ನು ಸೂಚಿಸುವುದು ( 2 ) ರೋಗಿ, ವೈದ್ಯರ ಸೂಚನೆಗಳನ್ನು ಅನುಸರಿಸಿ ಅವರೊಡನೆ ಸಹಕರಿಸುವುದು. ಒಂದುಪಕ್ಷ ರೋಗಿ ವೈದ್ಯರ ಸೂಚನೆಗಳನ್ನು ಕಡೆಗಣಿಸಿದರು ವೈದ್ಯರ ಪ್ರಯತ್ನಗಳು ಫಲಪ್ರದವಾಗುವುದಿಲ್ಲ. ರೋಗಿಯನ್ನು ಚೆನ್ನಾಗಿ ಪರೀಕ್ಷಿಸುವುದು, ಹಾಗೂ ನಿವಾರಣೆಗೆ ತಕ್ಕ ಸೂಚನೆಗಳನ್ನು ನೀಡುವುದು ಇಷ್ಟೇ ವೈದ್ಯರ ಕೆಲಸವಾದರೆ ಅದು ಸಾಲದು. ರೋಗಿಯ ಮನೋವಿಜ್ಞಾನ, ಸಾಂಸ್ಕೃತಿಕಮಟ್ಟ ಮತ್ತು ರೋಗಿಗೆ ಸಂಬಂಧಪಟ್ಟ ಇತರ ಸಾಮಾಜಿಕ ವಿಷಯಗಳನ್ನು ಸಹಾ ವೈದ್ಯರು ಪರಿಶೀಲಿಸಬೇಕು

★ ಗಾಂಧೀಜಿಯು ಕೆಥರ್ ಮೇಯೋ ಬರೆದ ಪುಸ್ತಕವನ್ನು " ಜಾಡಮಾಲಿ ವರದಿ " ಎಂದು ಬಣ್ಣಿಸಿದರು ; ಆದರೆ ಲಾಲಾಜಿ ಈ ಗ್ರಂಥಕ್ಕೆ ಉತ್ತರ ರೂಪದಲ್ಲಿ ' ಅಸಂತುಷ್ಟ ಭಾರತ " ಎಂಬ ಹೊತ್ತಿಗೆ ಬರೆದು, ಉತ್ತರ ಅಮೇರಿಕಾ ಪರಿಸ್ಥಿತಿ ಭಾರತದ ಪರಿಸ್ಥಿತಿಗಿಂತ ಕೀಳು ಮಟ್ಟದಲ್ಲಿದೆಯೆಂದು ಸಾಧಿಸಿದರಲ್ಲದೆ, ಮೇಯೋಳ ಗ್ರಂಥ ಜಾಡಮಾಲಿ ವರದಿಗಿಂತಲೂ ನಿಕೃಷ್ಟವೆಂದು ತೋರಿಸಿದರು.


ಕೀರ್ತಿಗೊಬ್ಬ ಮಗ

ಆರತಿಗೊಬ್ಬ ಮಗಳು,



ಮಿತ ಸಂತಾನವೇ ಹಿತಜೀವನದ ಆಧಾರ

ಎರಡು ಅಥವಾ ಮೂರು ಮಕ್ಕಳು ಸಾಕು



ಪಡೆದರೆ ಮುತ್ತಿನಂಥಾ ಎರಡು

ಅಥವಾ ಮೂರೇ ಮಕ್ಕಳು ಪಡೆಯಬೇಕು.